## ಸಾಕ್ಷಿಗೆ ಪ್ರಮಾಣ ವಚನ ಬೋದಿಸಿದ ದಿನಾಂಕಃ **16-08-2023**

### ಮುಂದುವರೆದ ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದ

ನನ್ನ ತಂದೆ ಖರೀದಿಸಿದ ಕ್ರಯ ಪತ್ರವನ್ನು ನೋಡಿದರೆ ಗುರುತಿಸುತ್ತೇನೆ ಸಾಕ್ಷಿಗೆ ದಿಃ 18/05/1974 ರ ಒಂದು ಕ್ರಯ ಪತ್ರದ ದೃಢೀಕೃತ ನಕಲನ್ನು ತೋರಿಸಲಾಗಿ , ಅದನ್ನು ನೋಡಿ ಒಪ್ಪಿಕೊಂಡಿದ್ದರಿಂದ ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ನಂತರ ಪೋಲೀಸರು ಸರ್ವೆ ಮಾಡಿ ನನ್ನನ್ನು ನೊಂದಣಿ ಕಛೇರಿಗೆ ಮತ್ತು ತಹಶೀಲ್ದಾರ್ ಕಛೇರಿಗೆ ಕರದುಕೊಂಡು ಹೋಗಿದ್ದರು. ಘಟನೆ ಬಗ್ಗೆ ನನ್ನನ್ನು ವಿಚಾರಿಸಿದ್ದಾರೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯ ಮುಂದೆ ಇರುವ ಮೂರು ಜನ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. 4 ನೇ ಆರೋಪಿಯು ಗೈರು ಹಾಜರಿದ್ದು, ಅವರ ಪರ ವಕೀಲರು ಆತನ ಗುರುತಿಸುವಿಕೆಯ ಬಗ್ಗೆ ತಕರಾರು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

(ಮಾನ್ಯ ಸ ಸ ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು)

### ಪಾಟೀ ಸವಾಲು: ಮಾನ್ಯ ಸ ಸ ಅ ರವರಿಂದ

ದಿಃ 12-02-2014 ರಂದು ಸಂಜೆ 05-30 ರಿಂದ 06-15 ರವರೆಗೆ ಸಿಂಧನೂರಿನ ತಹಶೀಲ್ದಾರ್ ಕಛೇರಿಯಲ್ಲಿ ಗಣಕಯಂತ್ರ ಕೊಠಡಿಯಲ್ಲಿ ಚಾಸಾ-11 ಮತ್ತು 12 ರವರ ಸಮಕ್ಷಮ ನಾನು ತೋರಿಸಿದಂತೆ ಪಂಚನಾಮೆ ಜರುಗಿಸಿದರು ಎಂದರೆ ಸರಿ.

ಅದೇ ರೀತಿ ದಿಃ 12-02-2014 ರಂದು ಮಧ್ಯಾಹ್ನ 02-30 ರಿಂದ 03-15 ರವರೆಗೆ ಸಿಂಧನೂರಿನ ನೊಂದಣಿಧಿಕಾರಿಯ ಕಛೇರಿಯಲ್ಲಿ ಚಾಸಾ-9 ಮತ್ತು 10 ರವರ ಸಮಕ್ಷಮ ನಾನು ತೋರಿಸಿದಂತೆ ಪಂಚನಾಮೆ ಜರುಗಿಸಿದರು ಎಂದರೆ ಸರಿ.

### ಪಾಟೀ ಸವಾಲುಃ **2** ನೇ ಆರೋಪಿ ಪರ ವಕೀಲರಿಂದ

ನಾನು ನೇರವಾಗಿ ನ್ಯಾಯಾಲಯದಲ್ಲಿ ಖಾಸಗೀ ದೂರು ಸಲ್ಲಿಸಿದ್ದೇ ಎಂದರೆ ಸರಿ. ದೂರು ನೀಡುವ ಪೂರ್ವದಲ್ಲಿ ನಾನು ಪೋಲಿಸರಿಗೆ ದೂರು ನೀಡಿರಲಿಲ್ಲ ಎಂದರೆ ಸರಿ.

ಸರ್ವೆ ನಂ. 758/ಅ ರಲ್ಲಿ 3-4 ಹಿಸ್ಸೆಗಳು ಇರುವ ಬಗ್ಗೆ ಗೊತ್ತು. ಆದರೆ ಎಷ್ಟು ಇವೆ ಎಂದು ಖಚಿತವಾಗಿ ಗೊತ್ತಿಲ್ಲ. ಈ ದೂರು ದಾಖಲಿಸುವ ಪೂರ್ವದಲ್ಲಿ ಉಪವಿಭಾಗ ಅಧಿಕಾರಿಗಳ ಮುಂದೆ ಮೇಲ್ಮನವಿ ಸಲ್ಲಿಸಿದ್ದೇನೆ ಎಂದರೆ

ಸರಿ. ಸಾಕ್ಷಿ ಮುಂದುವರೆದು ಮಾಡಿರುವುದಿಲ್ಲ ಎಂದು ನುಡಿದಿರುತ್ತಾರೆ.

ಸರ್ವೆ ನಂ. 758/ಅ ರಲ್ಲಿ ಎಷ್ಟು ಎಕರೆ ಜಮೀನು ಇತ್ತು ಎಂದು ನನಗೆ ಮಾಹಿತಿ ಇಲ್ಲ. 1954 ರಿಂದ 1982 ರವರೆಗೆ ಆ ಸರ್ವೆ ನಂಬರಿನಲ್ಲಿ 14 ಎಕರೆ 2 ಗುಂಟೆ ಜಮೀನು ಇತ್ತು ಎಂದರೆ ನನಗೆ ಗೊತ್ತಿಲ್ಲ. 1983-84 ನೇ ಸಾಲಿನಲ್ಲಿ ಆ ಒಟ್ಟು ಜಮೀನು ದುರುಗಪ್ಪ ತಂದೆ ಪವಡೆಪ್ಪರವರ ಹೆಸರಿನಲ್ಲಿತ್ತು. ಆನಂತರ ಆತನ ಮಕ್ಕಳು ಪಾಲು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿ. ಆ ಪವಡೆಪ್ಪರವರಿಗೆ ಹೀರೆ ದುರುಗಪ್ಪ, ಸಣ್ಣ ದುರುಗಪ್ಪ ಮತ್ತು ಹನಮಂತಪ್ಪ ಮೂರು ಜನ ಮಕ್ಕಳು ಎಂದರೆ ಸರಿ. ಸರ್ವೆ ನಂ.757/ಬ ರಲ್ಲಿ 1 ಎಕರೆ 1| ಗುಂಟೆ, ಸರ್ವೆ ನಂ. 758/ಅ ರಲ್ಲಿ 3 ಎಕರೆ 18 ಗುಂಟೆ ಜಮೀನು ಹಿರೇ ದುರುಗಪ್ಪನ ಭಾಗಕ್ಕೆ ಬಂದಿದ್ದವು ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ. 758/ಅ ರಲ್ಲಿ ಸಣ್ಣ ದುರುಗಪ್ಪನ ಭಾಗಕ್ಕೆ 4 ಎಕರೆ 18 ಗುಂಟೆ ಜಮೀನು ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ ಮತ್ತು ಸರ್ವೆ ನಂ. 758/ಅ ರಲ್ಲಿ ಹನುಮಂತಪ್ಪ ರವರಿಗೆ 4 ಎಕರೆ 18 ಗುಂಟೆ ಜಮೀನು ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ.

ನಾನು ಉಪವಿಭಾಗಧಿಕಾರಿಗ ಮುಂದೆ ಮೇಲ್ಮನವಿ ದಾಖಲಿಸಿದ ನಂತರ 2 ಎಕರೆ 18 ಗುಂಟೆ ಜಮೀನು ಮಾರಾಟ ಮೂಲಕ 1 ನೇ ಆರೋಪಿಯಿಂದ 2 ನೇ ಆರೋಪಿಯು ಖರೀದಿಸಿದ್ದ ಎಂದರೆ ಸಾಕ್ಷಿಯು ಸ್ವಲ್ಪ ಹೊತ್ತು ವಿಚಾರ ಮಾಡಿ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಆ ಮೇಲ್ಮನವಿಯಲ್ಲಿ ಪಹಣಿ ಯಾರ ಹೆಸರಿನಲ್ಲಿ ಇತ್ತು ಅವರನ್ನು ಪಕ್ಷಗಾರರನ್ನಾಗಿ ಮಾಡಿರಲಿಲ್ಲ ಎಂದರೆ ಸರಿ. ನನ್ನ 1 ಎಕರೆ ಜಮೀನು ಹೋಗಿದೆ ಎಂದು ಹೇಳಿ ಮೇಲ್ಮನವಿ ಸಲ್ಲಿಸಿ 1 ನೇ ಆರೋಪಿಯ ಹೆಸರಿಲ್ಲಿರುವ 2 ಎರಕೆ 18 ಗುಂಟೆ ಜಮೀನಿನ ಮುಟೇಶ್ ರದ್ದುಪಡಿಸಿದ್ದೇನೆ ಎಂದರೆ ಸಾಕ್ಷಿಯು ಆಗ ಅಷ್ಟು ಇತ್ತು ಆದ್ದರಿಂದ ರದ್ದು ಪಡಿಸಿದ್ದೇವೆ ಎಂದು ನುಡಿಯುತ್ತಾರೆ. ಆ ಮೇಲ್ಮನವಿಯಲ್ಲಿ ಎದುರುದಾರರ ಅಧಿಕಾರಿಗಳು ಹಾಜರಿರಲಿಲ್ಲ ಎಂದರೆ ಸರಿ. ಆ ಎದುರುದಾರರು ಈ ಪ್ರಕರಣದಲ್ಲಿ ಸಾಕ್ಷಿದಾರರು ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ನಮ್ಮ ತಂದೆ ಖರೀಸಿದ ಸರ್ವೆ ನಂಬರಿನಲ್ಲಿ ಮೂಲತಃ ಎಷ್ಟು ಜಮೀನು ಇತ್ತು ನನಗೆ ಮಾಹಿತಿ ಇಲ್ಲ. ಈರಪ್ಪ ತಂದೆ ಬಂಡೆಪ್ಪರವರ ಹೆಸರಿಗ ಎಷ್ಟು ಜಮೀನು ಇತ್ತು ಎಂದು ಮತ್ತು ಎಷ್ಟು ಜಮೀನು ಮಾರಾಟ ಮಡಿದ್ದಾನೆ ಎಂದು ನಾನು ದಾಖಲೆ ಪರಿಶೀಲಿಸಿಲ್ಲ. 1 ನೇ ಆರೋಪಿಯ ಭಾಗಕ್ಕೆ ಬಂದ ಜಮೀನಿನ ಪೈಕಿ 2 ಎಕರೆ 18 ಗುಂಟೆ ಜಮೀನನ್ನು 2 ನೇ ಆರೋಪಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈ ವಿಚಾರ ನನಗೆ ಗೊತ್ತಿದ್ದರೂ ಸಹ ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳುದೂರನ್ನು ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಉಪವಿಭಾಗಧಿಕಾರಿಗಳ ಆದೇಶದ ವಿರುದ್ಧ 2 ನೇ ಆರೋಪಿಯು ಮೇಲ್ಮನವಿ ಸಲ್ಲಿಸಿದ್ದ ಎಂದರೆ ಸಾಕ್ಷಿಯು ಸ್ವಲ್ಪ ಹೊತ್ತು ವಿಚಾರ ಮಾಡಿ ನ್ಯಾಯಾಲಯ ಆ ಪ್ರಶ್ನೆಯನ್ನು ಎರಡು ಬಾರಿ ಕೇಳಿದ ನಂತರ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

ನನ್ನ ಮಗ ಚಾಸಾ-2 ರವರು ವಕೀಲರಿದ್ದಾರೆ ಎಂದರೆ ಸರಿ. ಅವರು ಸಿಂಧನೂರು ನ್ಯಾಯಾಲಯದಲ್ಲಿ ವಕೀಲ ವೃತ್ತಿ ಮಾಡುತ್ತಿದ್ದಾರೆ ಎಂದರೆ ಸರಿ. ಈ ವಿಚಾರವಾಗಿ ನನಗೆ ಯಾವುದೇ ವೈಯಕ್ತಿಕ ಮಾಹಿತಿ ಇಲ್ಲ, ಚಾಸಾ-2 ರವರೇ ಪರಿಶೀಲಿಸಿದ್ದರಿಂದ ಅವರಿಗೆ ಮಾಹಿತಿ ಇದೆ ಎಂದರೆ ಸರಿ. ಈ ಪ್ರಕರಣದ ಬಗ್ಗೆ ನನಗೆ ಮಾಹಿತಿ ಇಲ್ಲ, ಚಾಸಾ-2 ರವರಿಗೆ

ಮಾಹಿತಿ ಇದೆ ಎಂದರೆ ಸರಿ. ನಾನು ಪೋಲಿಸರಿಗೆ ಯಾವುದೇ ದಾಖಲೆ ನೀಡಿಲ್ಲ, ಚಾಸಾ-2 ರವರೇ ನೀಡಿದ್ದಾರೆ ಎಂದರೆ ಸರಿ. ಸರ್ವೆ ನಂ. 758/ಅ ರ ಜಮೀನಿನ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ, ಚಾಸಾ-2 ರವರಿಗೆ ಇದೆ ಎಂದರೆ ಸರಿ. ಚಾಸಾ-2 ರವರು ಹೇಳಿದಂತೆ ನಾನು ನಡೆದುಕೊಂಡಿದ್ದೇನೆ ಎಂದರೆ ಸರಿ.

ದಿಃ 26-04-2014 ರಂದು ನಾನು ದೂರು ದಾಖಲಿಸುವಾಗ 4 ನೇ ಆರೋಪಿತನು ಸರ್ಕಾರಿ ನೌಕರರು ಅಲ್ಲ ಎಂದು ಹೇಳಿದ್ದೇನೆ ಎಂದರೆ ಸರಿ. 4 ನೇ ಆರೋಪಿಯು ಇವತ್ತಿಗೂ ಸಹ ಸರ್ಕಾರಿ ನೌಕರಿ ಮಾಡುತ್ತಿದ್ದಾನೆ ಎಂದರೆ ಸಾಕ್ಷಿಯು ಸುಮ್ಮನೆ ನಿಂತಿರುತ್ತಾರೆ.

ಕಂದಾಯ ದಾಖಲಾತಿಗಳು ತಹಶೀಲ್ದಾರ ರವರ ಸುಪತ್ತಿಗೆಯ್ ಇರುತ್ತವೆ ಎಂದರೆ ಸಾಕ್ಷಿಯು ಸುಮ್ಮನೆ ನಿಂತಿರುತ್ತಾರೆ. ಹಾಗಾಗೀ ಆ ದಾಖಲೆಗಳ ಬಗ್ಗೆ ಯಾವುದೇ ಮೋಸ ವಂಚನೆ ಯಾಗಿಲ್ಲ ಎಂದರೆ ಸಾಕ್ಷಿಯು ಸುಮ್ಮನೆ ನಿಂತಿರುತ್ತಾರೆ. 2 ನೇ ಆರೋಪಿಯು ಖರೀದಿಸಿದ ದಾಖಲೆಗಳ ಪ್ರಕಾರ ಪಹಣಿ ಆತನ ಹೆಸರಿನಲ್ಲಿ ಆಗಿದೆ ಮತ್ತು ಆತನೇ ತನ್ನ ಜಮೀನಿನ ಸ್ವಾಧೀನದಲ್ಲಿ ಇದ್ದಾನೆ ಎಂದರೆ ನಮ್ಮ ಸ್ವಾದೀನದಲ್ಲಿ ಇದೆ. 2 ನೇ ಆರೋಪಿಯು ಖರೀದಿಸಿದ ದಾಖಲೆಗಳನ್ನು ನಾನು ನೋಡಿಲ್ಲ. ನನ್ನ ಜಮೀನಿನ ವಿಚಾರವಾಗಿ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದ್ದೇ. ಅದು ನನ್ನ ಪರವಾಗಿ ತೀರ್ಮಾನವಾಗಿದ. ಅದರ ದಾಖಲೆಗಳನ್ನು ಈ ಪ್ರಕರಣದಲ್ಲಿ ಸಲ್ಲಿಸಿದ್ದೇನೆ. 1 ನೇ ಆರೋಪಿಯು ಖರೀದಿ ಆಧಾರದ ಮೇಲೆ ಸ್ವಾಧೀನದಲ್ಲಿ ಇದ್ದಾನೆ. ಆತನು ಯಾವುದೇ ರೀತಿಯ ಅಪರಾಧ ಮಾಡಿಲ್ಲ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ **1** ನೇ ಆರೋಪಿ ಪರ ವಕೀಲರಿಂದ</u>

ಪವಡೆಪ್ಪನ 3 ನೇ ಮಗ ಹನುಮಂತಪ್ಪರವರ ಮಗ 1 ನೇ ಆರೋಪಿ ಎಂದರೆ ಸರಿ.

ನಾವು ಎರಡು ಜನ ಅಣ್ಣ-ತಮ್ಮಂದಿರು. ನನ್ನ ತಮ್ಮನ ಹೆಸರು ದುರುಗಪ್ಪ. 1 ನೇ ಆರೋಪಿಯ ತಾಯಿ ಮತ್ತು ನನ್ನ ತಮ್ಮನ ಹೆಂಡತಿ ಅಕ್ಕ-ತಂಗಿಯರು ಎಂದರೆ ಸರಿ. ಆದರೆ ಖಾಸಾ ಅಕ್ಕ-ತಂಗಿಯರು ಅಲ್ಲ. ನನ್ನ ತಮ್ಮನ ಮಗಳನ್ನು 1 ನೇ ಆರೋಪಿಯ ತಮ್ಮನಿಗೆ ಮದುವೆ ಮಾಡಿಕೊಟ್ಟಿದ್ದೇವೆ ಎಂದರೆ ಸರಿ. ನನ್ನ ತಮ್ಮ ದುರುಗಪ್ಪನಿಗೆ ಗಂಡು ಸಂತಾನ ಇಲ್ಲ ಎಂದರೆ ಸರಿ. ಆತನಿಗೆ ಲಕ್ಷ್ಮಿ ಎನ್ನುವ ಒಬ್ಬಳೇ ಮಗಳು ಎಂದರೆ ಸರಿ.

ನಮ್ಮ ತಂದೆ ಖರೀದಿಸಿದ 1 ಎಕರೆ ಜಮೀನು 1979 ರಲ್ಲಿ ಪಂಪಣ್ಣ ತಂದೆ ಹನುಮಂತಪ್ಪರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಪಂಪಣ್ಣ ತಂದೆ ಹನುಮಂತಪ್ಪರವರು ಖರೀದಸಿದ ಜಮೀನಿನಲ್ಲಿ ಖರೀದಿ ಮಾಡಿದಾಗಿನಿಂದಲೂ ಸ್ವಾಧೀನದಲ್ಲಿದ್ದಾನೆ ಎಂದರೆ ನನಗೆ ಗೊತ್ತಿಲ್ಲ.

ನನ್ನ ತಮ್ಮ ದುರುಗಪ್ಪ ಮತ್ತು ನನ್ನ ನಡುವೆ ಆಸ್ತಿ ವಿಚಾರವಾಗಿ ವ್ಯಾಜ್ಯ ಬಂದಿತ್ತು ಎಂದರೆ ಸರಿ. ನನ್ನ ತಮ್ಮ ಮೃತ ಪಟ್ಟ ನಂತರ ಆತನ ಮಗಳು ಲಕ್ಷ್ಮಿ ರವರು ಭಾಗ ಕೋರಿ ನನ್ನ ವಿರುದ್ದ ದಾವೆ ಸಲ್ಲಿಸಿದ್ದಳು ಎಂದರೆ ಸರಿಯಲ್ಲ. ನನ್ನ ತಮ್ಮನ ಮಗಳಿಗೆ ಭಾಗ ಕೊಡಬೇಕಾಗುತ್ತದೆ ಎಂದು ಹೇಳಿ ತನನ್ನ ತಮ್ಮನ ಮಗಳನ್ನು ಮದುವೆ ಮಾಡಿಕೊಂಡ 1 ನೇ ಆರೋಪಿಯ ತಮ್ಮನಿಗೆ ಆಸ್ತಿ ಹೋಗುತ್ತದೆ ಎಂದು ಹೇಳಿ 1 ನೇ ಆರೋಪಿಯ ಈ ವಿರುದ್ಧ ಈ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ಪೋಲಿಸರು ನನ್ನನ್ನು ಯಾವ ದಿನಾಂಕದಂದು ಎಲ್ಲಿ ಕರೆಸಿದ್ದರು ಎಂದು ಹೇಳಲಾಗುವುದಿಲ್ಲ. ಚಾಸಾ-2 ರವರ ಮಾತು ಕೇಳಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. (ಉಳಿದ 2 ನೇ ಆರೋಪಿ ಪಿರ ಸವಾಲನ್ನು ಅಳವಡಿಕೊಂಡಿದ್ದಾರೆ).

<u>ಪಾಟೀ ಸವಾಲುಃ **3** ಮತ್ತು **4** ನೇ ಆರೋಪಿ ಪರ ವಕೀಲರಿಂದ</u>

(3 ಮತ್ತು 4 ನೇ ಆರೋಪಿ ಪರ ವಕೀಲರ ಪರವಾಗಿ ಶ್ರಿ ಎ ಪಿ ಹೆಚ್ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಾಕ್ಷಿಯು ಸುಮಾರು 77 ವರ್ಷದ ಹಿರಿಯ ನಾಗರಿಕರು ಇರುವುದರಿಂದ ಹಾಗೂ ಪಾಟೀ ಸವಾಲಿಗೆ ಮುಂದೂಡಲು ಯಾವುದೇ ಸಕಾರಣ ಇಲ್ಲದ ಕಾರಣ 3 ನೇ ಮತ್ತು 4 ನೇ ಆರೋಪಿ ಪರ ವಕೀಲರ ಮನವಿಯನ್ನು ತಿರಸ್ಕರಿಸಿ ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

ಮರುವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ ಹೇ ಕೇ ಸರಿ ಇದೆ.

ಪ್ರಧಾನ ಜೆ.ಎಮ್.ಎಫ್.ಸಿ., ಸಿಂಧನೂರು.